

# ನಾವು ಅವಕಾಶಗಳನ್ನು ನಿರ್ಲಕ್ಷಿಸಿದರೆ ನಮ್ಮನ್ನು ಯಶಸ್ಸು ನಿರ್ಲಕ್ಷಿಸುತ್ತದೆ...

**ರ್‍ಯಾಂಪ್ ಮೇಲೆ ನಡೆಯುತ್ತಲೇ ಬೆಳ್ಳಿತೆರೆಯ ಕನಸು ಕಾಣುತ್ತಿರುವ ಯುವ ರೂಪದರ್ಶಿ ಧೀಮಂತ್, ಮಾಡೆಲಿಂಗ್ ಕ್ಷೇತ್ರ ಪ್ರವೇಶಿಸುವವರಿಗೆ ಟಿಪ್ಸ್ ನೀಡಿದ್ದಾರೆ.**

■ **ಶಶಿಕುಮಾರ್ ಸಿ.**

ಬೆಂಗಳೂರಿನ ದಯಾನಂದ ಸಾಗರ್ ಕಾಲೇಜಿನಲ್ಲಿ ಎಂಸಿಎ ಪದವಿ ಪಡೆದಿರುವ ಧೀಮಂತ್ ಆರ್. ಮಾಡೆಲಿಂಗ್ ಲೋಕದಲ್ಲಿ ಹೊಸ ಮಿನುಗುತಾರೆ. 24 ವರ್ಷದ ಈ ಸ್ಪುರದ್ರೂಪಿ ಚೆಲುವನಿಗೆ ದ್ವಿತೀಯ ಪಿಯುಸಿವರೆಗೆ ಮಾಡೆಲಿಂಗ್ ಲೋಕದ ಗಂಧಗಾಳಿಯೂ ಇರಲಿಲ್ಲ. ಪಿಯುಸಿ ಓದುತ್ತಿದ್ದಾಗ ನಡೆದ ಅಂತರಕಾಲೇಜು ಫ್ಯಾಷನ್ ಶೋನಲ್ಲಿ ರ್‍ಯಾಂಪ್ ಮೇಲೆ ಹೆಜ್ಜೆ ಹಾಕುವಂತೆ ಶರ್ಮಿಳಾ ಎನ್ನುವ ಉಪನ್ಯಾಸಕಿ ಪ್ರೇರೇಪಿಸಿದರು. 'ಅಲ್ಲಿಂದ ನನ್ನ ಆಲೋಚನೆಯ ದಿಕ್ಕು ಮಾಡೆಲಿಂಗ್‌ನತ್ತ ಹರಿಯಿತು' ಎನ್ನುತ್ತಾರೆ ಧೀಮಂತ್ .

'ರ್‍ಯಾಂಪ್ ಹಳತಾದಂತೆ ನನ್ನ ಉಡುಪು, ನಡೆದಾಡುವ ಶೈಲಿ, ನಡವಳಿಕೆ, ಹಾಸ್ಯಪ್ರಜ್ಞೆ, ಹೀಗೆ ಎಲ್ಲವೂ ಬದಲಾಗುತ್ತಾ ಸಾಗಿತು' ಎನ್ನುವ ಅವರು, ಬಿಸಿಎ ಪದವಿ ಮಾಡುವವರೆಗೆ ಅಂತರಕಾಲೇಜು ಸ್ಪರ್ಧೆಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದರಂತೆ. ಪದವಿ ಮುಗಿದ ಬಳಿಕ 'ಮಿಸ್ಟರ್ ಕರ್ನಾಟಕ' ಫ್ಯಾಷನ್ ಶೋಗಾಗಿ ಆಡಿಷನ್ ಕೊಟ್ಟಿದ್ದ ಅವರು ಆ ಸ್ಪರ್ಧೆಯಲ್ಲಿ ಪ್ರಶಸ್ತಿಯನ್ನೂ ಮುಡಿಗೇರಿಸಿಕೊಂಡರು. ಅದಾದ ಎರಡೇ ತಿಂಗಳಲ್ಲೇ ಮಿಸ್ಟರ್ 'ಸೌತ್ ಇಂಡಿಯಾ' ಟೈಟಲ್ ಅನ್ನೂ ತನ್ನದಾಗಿಸಿಕೊಂಡ ಧೀಮಂತ್ , ಮಿಸ್ಟರ್ ಇಂಡಿಯಾ ಸ್ಪರ್ಧೆಯ ಅಂತಿಮ ಹಂತ ಪ್ರವೇಶಿಸಿ 'ಬೆಸ್ಟ್ ಬಾಡಿ' ಹಾಗೂ 'ಪಾಪ್ಯುಲರ್ ಫೇಸ್' (ಪುರುಷ) ವಿಭಾಗದಲ್ಲಿ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಮಾಡೆಲ್ ವೃತ್ತಿಯ ಜೊತೆ ಜೊತೆಗೆ ಡಿಸೈನರ್ಸ್ ಶೋ, ಫೋಟೊ ಶೂಟ್, ಆ್ಯಡ್ ಶೂಟ್, ಪ್ರಿಂಟ್ ಶೂಟ್ ಸೇರಿದಂತೆ ಆ ಕ್ಷೇತ್ರದಲ್ಲಿನ ಬಹು ಆಯಾಮಗಳಲ್ಲಿ ಧೀಮಂತ್ ತೊಡಗಿಕೊಂಡಿದ್ದಾರೆ. 'ಗ್ಲಾಮ್ ಲೈಫ್' ಮಾಡೆಲಿಂಗ್ ಏಜೆನ್ಸಿಯ ವ್ಯವಸ್ಥಾಪಕ ನಿರ್ದೇಶಕರಾಗಿಯೂ ಕೆಲಸ ಮಾಡುತ್ತಿದ್ದಾರೆ. ಫ್ಯಾಷನ್ ಕೊರಿಯೋಗ್ರಫಿ, ಮಾಡೆಲ್‌ಗಳಿಗೆ ತರಬೇತಿ ನೀಡುವ ಕೆಲಸದಲ್ಲೂ ತೊಡಗಿಸಿಕೊಂಡಿದ್ದಾರೆ.

ಡಯೆಟ್ ಸಂಬಂಧವಾಗಿ ತನ್ನದೇ ಕೆಲ ಪ್ಲಾನ್‌ಗಳನ್ನು ಹಾಕಿಕೊಂಡಿರುವ ಅವರು, ಅದನ್ನು ತಪ್ಪದೇ ಪಾಲಿಸುತ್ತಾರೆ. ಜಿಮ್‌ನಲ್ಲಿ ಗಂಟೆಗಳ ಕಾಲ ದೇಹ ದಂಡಿಸುವ ಅವರು, ತಮ್ಮ ದೇಹ ದೃಢತೆಗೆ ಸಿಹಿ ಹಾಗೂ ಉಪ್ಪಿನ ಆಹಾರ ಸೇವನೆಯಲ್ಲಿ ಮಿತವಾಗಿದ್ದಾರೆ.

ಮಾಡೆಲಿಂಗ್ ಎಂದಾಕ್ಷಣ ಸುಂದರ ಯುವತಿಯರೇ ಕಣ್ಣಮುಂದೆ ಬರುತ್ತಾರೆ. ಹೀಗಿರುವಾಗ ಹುಡುಗರಿಗೆ ಅವಕಾಶಗಳಿವೆಯೇ ಎಂದು ಪ್ರಶ್ನಿಸಿದರೆ, 'ನಿಜ, ಈ ಕ್ಷೇತ್ರದಲ್ಲಿ ಹುಡುಗರಿಗೆ ಅವಕಾಶಗಳ ಕೊರತೆ ಇದೆ. ಮಾಡೆಲಿಂಗ್‌ಗೆ ಹೊಸದಾಗಿ ಕಾಲಿಡುವ ಯುವತಿಯರಿಗೆ ಕಡಿಮೆ ಅವಧಿಯಲ್ಲಿ ಹೆಚ್ಚು ಅವಕಾಶಗಳು ಸಿಗುತ್ತವೆ. ಆದರೆ ಹುಡುಗರು ವರ್ಷಾನುಗಟ್ಟಲೇ ಕಾಯಬೇಕು' ಎನ್ನುತ್ತಾರೆ.

'ಮಾಡೆಲಿಂಗ್‌ಗೆ ಹೆಜ್ಜೆ ಇಟ್ಟ ಪ್ರಾರಂಭದಲ್ಲಿ ಸಿಗುವ ಯಾವುದೇ ಅವಕಾಶ ಮಿಸ್ ಮಾಡಿಕೊಳ್ಳಬೇಡಿ. ಅವಕಾಶ ಸಣ್ಣದೋ ದೊಡ್ಡದೋ ಬಳಸಿಕೊಳ್ಳಿ. ನಿರ್ಲಕ್ಷ್ಯ ಮಾಡಿದ್ರೆ ಯಶಸ್ಸು ನಮ್ಮನ್ನು ನಿರ್ಲಕ್ಷಿಸುತ್ತದೆ. ಒಂದೇ ದಿನದಲ್ಲಿ ಯಾರೂ ಮಾಡೆಲ್ ಆಗಲ್ಲ. ಸಕಾರಾತ್ಮಕ ಮನೋಭಾವದ ಬಾಡಿ ಲ್ಯಾಂಗ್ವೇಜ್ ಬೆಳೆಸಿಕೊಳ್ಳಬೇಕು. ಸಾಮಾಜಿಕವಾಗಿ ಸಕ್ರಿಯವಾಗಿರಬೇಕು' ಎಂದು ಮಾಡೆಲಿಂಗ್‌ಗೆ ಬರಬಯಸುವವರಿಗೆ ಸಲಹೆ ಕೊಡುತ್ತಾರೆ. ಸಾಮಾಜಿಕ ಜಾಲತಾಣಗಳಲ್ಲಿ ಕ್ರಿಯಾಶೀಲರಾಗಿದ್ದರೆ ಫೋಟೊಗ್ರಾಫರ್, ಡಿಸೈನರ್ಸ್, ಮೇಕಪ್ ಆರ್ಟಿಸ್ಟ್, ಮಾಡೆಲ್ಸ್ ಸಂಪರ್ಕ ಲಭ್ಯವಾಗುತ್ತದೆ ಎನ್ನುವುದು ಅವರ ಅನುಭವದ ಮಾತು.

ಟಾಪ್ ಗ್ರೂಮರ್ ಆ್ಯಂಡ್ ಫ್ಯಾಷನ್ ಕೊರಿಯೋಗ್ರಫರ್ ಆಗಿ ಹೆಸರು ಮಾಡುವ ಹಾಗೂ ಸಿನಿಮಾಗಳಲ್ಲಿ ನಟಿಸುವ ಆಸೆ ಇರುವ ಧೀಮಂತ್ 'ಮಾಡೆಲಿಂಗ್ ಹಾಗೂ ಫಿಲ್ಮ್ ಇಂಡಸ್ಟ್ರಿಗೆ ಒಂಥರಾ ಅವಿನಾಭಾವ ಸಂಬಂಧವಿದೆ. ನಟರಾಗುವ ಕನಸುಳ್ಳ ಬಹುತೇಕರು ಮಾಡೆಲಿಂಗ್ ಕ್ಷೇತ್ರವನ್ನು ವೇದಿಕೆಯಾಗಿಸಿಕೊಳ್ಳುತ್ತಾರೆ. ನನ್ನ ವಿಚಾರದಲ್ಲೂ ಹೀಗೆ. ಮಾಡೆಲಿಂಗ್‌ನಲ್ಲಿ ಗುರುತಿಸಿಕೊಂಡರೆ, ಸಿನಿಮಾ ಇಂಡಸ್ಟ್ರಿಯಲ್ಲೂ ಗುರುತು ಸಿಗುತ್ತದೆ. ನನಗೂ ನಟನಾಗುವ ಆಸೆ ಇದೆ. ಅದಕ್ಕಾಗಿ ತಯಾರಿ ನಡೆಸಿದ್ದೇನೆ' ಎನ್ನುತ್ತಾರೆ.

ರೂಪದರ್ಶಿಯಾಗಿ ಮಾತ್ರವಲ್ಲ, ಸಾಹಸ ಕಲೆಗಳಲ್ಲೂ ಧೀಮಂತ್ ಅವರಿಗೆ ಪರಿಶ್ರಮವಿದೆ. ಟೇಕ್ವೊಂಡೊದಲ್ಲಿ ಐದು ವರ್ಷ ಅಭ್ಯಾಸ ಮಾಡಿದ್ದು, ಬ್ಲಾಕ್ ಬೆಲ್ಟ್ ಸಹ ಪಡೆದಿದ್ದಾರೆ. ಬಾಕ್ಸರ್ ಆಗಿ ಎರಡು ವರ್ಷ ಗುರುತಿಸಿಕೊಂಡಿದ್ದ ಅವರು, ರೇಖಾಚಿತ್ರಗಳನ್ನು ಅದ್ಭುತವಾಗಿ ಬಿಡಿಸುತ್ತಾರೆ.

'ಅವಕಾಶಗಳಿಗಾಗಿ ನಾವೇ ಹುಡುಕಾಟ ನಡೆಸಬೇಕು. ನಮ್ಮ ಅನುಭವ, ನಾವು ಎಷ್ಟರ ಮಟ್ಟಿಗೆ ಆ್ಯಕ್ಟೀವ್ ಆಗಿದ್ದೇವೆ ಎಂಬುದನ್ನು ಈ ಕ್ಷೇತ್ರ ದಿಟ್ಟಿಸುತ್ತದೆ. ಇದು ಸವಾಲಿನ ಕೆಲಸ. ಹೀಗಾಗಿ, ಕಠಿಣ ಪರಿಶ್ರಮದಿಂದ ಗುರುತಿಸಿಕೊಂಡು ಹೆಚ್ಚೆಚ್ಚು ಸಂಪರ್ಕ ಬೆಳೆಸಿಕೊಳ್ಳುವುದು ಇಲ್ಲಿ ಬಹುಮುಖ್ಯವಾಗುತ್ತದೆ' ಎನ್ನುತ್ತಾರೆ ಧೀಮಂತ್ . ■